**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

***<u>ಸಿ.ಸಿ. ನಂ.924/2025</u>***

*<u>ಫಿರ್ಯಾದುದಾರರುಃ</u>* ಸರ್ಕಾರದ ಪರವಾಗಿ ಬಾಳೆಹೊನ್ನೂರು ಪೊಲೀಸರು

**ವಿರುದ್ಧ**

| | | |
|---|---|---|
| *ಆರೋಪಿ/ತರುಃ* | 1 | ಜಗದೀಶ ಬಿನ್ ದೇವಯ್ಯ, 44 ವರ್ಷ, ಎಂ.ಯು. ಎಸ್. ಎಸ್. ಜೂನಿಯರ್ ಇಂಜಿಯರ್, ಬಾಳೆಹೊನ್ನೂರು, ವಾಸ ಕಾಳಿದಾರ ರಸ್ತೆ, ಕೊಪ್ಪ, ಸ್ವಂತ ಊರು ಲಕ್ಷ್ಮೀಪುರ ಗ್ರಾಮ, ಹೊಳೆನರಸೀಪುರ ಅಂಚೆ ಮತ್ತು ತಾಲ್ಲೂಕು, ಹಾಸನ ಜಿಲ್ಲೆ. |
| | 2 | ತಾಜ ಸಾಹೇಬ್ ಕೆ. ಬಿನ್ ಮೌಲಾ ಸಾಹೇಬ್, 39 ವರ್ಷ, ಪ್ರಭಾರ ಜೂನಿಯರ್ ಇಂಜಿಯರ್, ಮೆಸ್ಕಾಂ, ಬಾಳೆಹೊನ್ನೂರು, ಸ್ವಂತ ಊರು ಹಕ್ಕಂಡಿ ಗ್ರಾಮ ಮತ್ತು ಅಂಚೆ, ಹೂವಿನ ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ. |

***<u>ದೋಷಾರೋಪಣೆ</u>***

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 23.04.2024 ರಂದು ಬಾಳೆಹೊನ್ನೂರು ಮೆಸ್ಕಾಂ ನಲ್ಲಿ ಕಿರಿಯ ಮಾರ್ಗದಾಳು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮೃತ ಮಹದೇವಪ್ಪ ರವರಿಗೆ ಕೊಪ್ಪ ತಾಲ್ಲೂಕು, ದೇವಗೋಡು ಗ್ರಾಮದ ಸೀಗೋಡು ಎಸ್ಟೇಟ್ ಹತ್ತಿರ ಅಮ್ಮನಪಾಲ್ ಟಿ.ಸಿ. ಬಳಿ ದುರಸ್ತಿಗಾಗಿ 2 ನೇ ಆರೋಪಿಯು ನೇಮಕ ಮಾಡಿದ್ದಮೇರೆಗೆ ಮಹದೇವಪ್ಪ ರವರು ಸದರಿ ಸ್ಥಳಕ್ಕೆ ಹೋಗಿ ಜಯಪುರ ಎಕ್ಸ್ ಪ್ರೆಸ್ ಫೀಡರ್ ನ ಸೀಗೋಡು (ಅಮ್ಮನಪಾಲ್) ಎಸ್ಟೇಟ್ ನಲ್ಲಿ ಹಾದುಹೋಗಿರುವ 63 ಕೆ.ವಿ. ಎಲ್.ಟಿ. 4 ವೈರ್ ವಿದ್ಯುತ್ ಲೈನ್ ನ ಸಮಸ್ಯೆಯನ್ನು ಸರಿಪಡಿಸುವ ಸಲುವಾಗಿ ತನ್ನ ಫೋನಿನಿಂದ ಬಾಳೆಹೊನ್ನೂರು ಎಂ.ಯು.ಎಸ್.ಎಸ್ ಎಸ್. ನಲ್ಲಿ ಜೆ.ಇ. ಆಗಿ ಕೆಲಸ ಮಾಡುವ 1 ನೇ ಆರೋಪಿಗೆ ಕರೆ ಮಾಡಿ ಜಯಪುರ ಎಕ್ಸ್ ಪ್ರೆಸ್ ಫೀಡರ್ ನಲ್ಲಿ ವಿದ್ಯುತ್ ಇರುವ ಬಗ್ಗೆ ಕೇಳಿದಾಗ 1 ನೇ ಆರೋಪಿಯು ತನ್ನ ಕರ್ತವ್ಯದಲ್ಲಿ ನಿರ್ಲಕ್ಷ್ಯತನ ತೋರಿ ಮಹದೇವಪ್ಪ ರವರಿಗೆ ಸದರಿ ಲೈನ್ ನಲ್ಲಿ ವಿದ್ಯುತ್ ಪೂರೈಕೆ ಇಲ್ಲದಿದ್ದು ಇನ್ನೂ 10-20 ನಿಮಿಷಗಳು ಬರಬಹುದೆಂದು ತಿಳಿಸಿ ಜಯಪುರ ಎಕ್ಸ್ ಪ್ರೆಸ್ ನ ವಿದ್ಯುತ್ ಅನ್ನು ತಡೆ ಹಿಡಿಯದೇ ಇದ್ದುದರಿಂದ ಹಾಗೂ ಮಹದೇವಪ್ಪ ರವರು ವಿದ್ಯುತ್ ಕಂಬವನ್ನು ಹತ್ತಿ ದುರಸ್ತಿ ಕೆಲಸವನ್ನು ಮಾಡುತ್ತಿರುವಾಗ

ಸ್ಥಳದಲ್ಲೇ ಇದ್ದ 2ನೇ ಆರೋಪಿಯು ವಿದ್ಯುತ್ ಮಾರ್ಗಗಳ ಮತ್ತು ಉಪಕರಣ ದೋಷಗಳನ್ನು ಸರಿಪಡಿಸುವ ಮುನ್ನ ಸೂಕ್ತ ವಿದ್ಯುತ್ ಮಾರ್ಗಮುಕ್ತತೆಯನ್ನು ಪಡೆದು ಸುರಕ್ಷಾ ವಲಯಗಳನ್ನು ನಿರ್ಮಿಸಿಕೊಂಡು ಸುರಕ್ಷತಾ ಉಪಕರಣಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡಲು ಅನುವು ಮಾಡಿಕೊಡುವಲ್ಲಿ ವಿಫಲವಾಗಿದ್ದರಿಂದ ಮಧ್ಯಾಹ್ನ 1.10 ಗಂಟೆಗೆ ಕಂಬವನ್ನು ಹತ್ತಿ ದುರಸ್ತಿ ಕೆಲಸವನ್ನು ಮಾಡುತ್ತಿದ್ದ ಮಹದೇವಪ್ಪನಿಗೆ ಹಠಾತ್ತನೆ ವಿದ್ಯುತ್ ಸ್ಪರ್ಶಗೊಂಡು ಮೃತಪಟ್ಟಿರುತ್ತಾರೆ. ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 304(ಎ))**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ 1) ತಿಳಿಯಿತು

2) ತಿಳಿಯಿತು

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ 1) ವಿಚಾರಣೆಯಾಗಬೇಕು

2) ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 06.02.2026.

ಸಹಿ/- 06.02.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
*ಪ್ರದನ್ಯಾದಂಃ ಕೊಪ್ಪ*